(*c*) the reasons for such a long delay in disposing the applications ?

A.—Sri KADIDAL MANJAPPA (Minister for Revenue).—

(*a*)

1	Kudligi	... 552
2	Hospet	... 510
3	Mallapur	... 75
4	Harapanahalli	... 113
5	Hadagalli	... 965
6	Sandur	... 242
7	Bellary	... 901
8	Siruguppa	... 33

(*b*) Since 1958-59.

(*c*) The cases are pending in various stages of disposal.

ಶ್ರೀ ಎಂ. ಎಂ. ಪಾಟೀಲ್.—ಉತ್ತರದಲ್ಲಿ ನಿರೂಪಿಸಿರುವ ಪ್ರಕಾರ ನೋಡಿದರಾಗಿ, ಮೂರು ವರ್ಷಗಳ ಲಾಗಾಯ್ತು ಅನೇಕ ಅರ್ಜಿಗಳು ವಿತರಣೆಯಾಗದೆ ಉಳಿದುಕೊಂಡು ಹೋಗಿವೆ. ಇದರಿಂದಾಗಿ ಹೆಚ್ಚು ಆಹಾರ ಬೆಳೆಯುವ ಯೋಜನೆಗೆ, ತಮ್ಮ ಜಮೀನುಗಳಾಗಿಲ್ಲವೆಂಬ ಭಾವನೆಯಿಂದ, ಅತಂಕ್ರ ಬರುವುದಿಲ್ಲವೇ ?

†ಶ್ರೀ ಕಡಿದಾಳ್ ಮಂಜಪ್ಪ.—ಅದು ಸರ್ಕಾರದ ಜಮೀನು. ಅವರ ಜಮೀನು ಇಲ್ಲ.

ಶ್ರೀ ಎಂ. ಎಂ. ಪಾಟೀಲ್.—ಸರ್ಕಾರದವರು ಕೂಡ ಒಂದು ಪಾಲಿಸಿ ಮಾಡಿಕೊಂಡಿದ್ದೀರ ಯಾರಿಗೆ ಜಮೀನಿಲ್ಲರೋ, ಯಾರ ಸ್ವಾಧೀನದಲ್ಲಿ ಜಮೀನುಗಳಿವೆಯೋ, ಅವರಿಗೇ ಆ ಜಮೀನುಗಳ ಪಟ್ಟ ಮಾಡಿಕೊಡಬೇಕೆಂದು ಸರ್ಕಾರದವರು ಮಾಡಿಕೊಂಡಿದ್ದಾರೆ. ಅಂಥ ಕೇಸುಗಳನ್ನು ಜಾಗ್ರತೆ ವಿಚಾರಿ ಮಾಡಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ವಿಶೇಷ ಸಿಬ್ಬಂದಿ ನೇಮಕ ಮಾಡಿದ್ದೇವೆ. ನಾನಾ ಸ್ಪೇಷಿಯಲ್ಲಿ ಪೆಂಡಿಂಗ್ ಆಗಿವೆ. ಕೆಲವು ಕೇಸುಗಳಲ್ಲಿ ಆಕ್ಯುಪೆನ್ಸಿ ಪ್ರೈಸ್ ಕೊಟ್ಟಿಲ್ಲ ಇನ್ನು ಕೆಲವು ಕೇಸುಗಳಲ್ಲಿ ಬೇರೆ ಕಾರಣಗಳಿಗೋಸ್ಕರ ನಿಧಾನವಾಗಿದೆ. ಆದಷ್ಟು ಜಾಗ್ರತೆ ತಿರ್ವಾನ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇವೆ.

ಶ್ರೀ ಎಂ. ಎಂ. ಪಾಟೀಲ್.—ನಾನೆ ಗೊತ್ತಿರುವ ಹಾಗೆ ಅನೇಕ ಕೇಸುಗಳಲ್ಲಿ ತಮ್ಮ ಪಾಲಿನ ಹಣವನ್ನು ಕೊಟ್ಟಿದಾಗ್ಯೂ ಕೂಡ, ಅಧಿಕಾರಿಗಳ ಅಲಕ್ಷ್ಯದಿಂದ ಪಟ್ಟ ಸಿಗದೆ ಹೋಗದೆ ಇರತಕ್ಕಂಥಾದ್ದನ್ನು ಸರಿಪಡಿಸುತ್ತೀರ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಮಾನ್ಯವಾಗಿ ಹಣ ಕೊಟ್ಟಿರುವ ಕೇಸುಗಳನ್ನೆಲ್ಲ ಸ್ಯಾಂಕ್ಷನ್ ಮಾಡಿದ್ದಾರೆ. ಎಲ್ಲಿಯಾದರೂ ಅಪ್ಪಿತಪ್ಪಿ ಮಾಡದೆ ಇದ್ದರೆ, ಜಾಗ್ರತೆ ಮಾಡುವುದಕ್ಕೆ ಸೂಚನೆ ಕೂಡಲಾಗುತ್ತದೆ.

FORMATION OF ROADS UNDER RURAL COMMUNICATION FUND IN PUBLIC WORKS DEPARTMENT DIVISIONS OF KOLAR AND CHICKBALLAPUR.

*Q.—723. Sri E. NARAYANA GOWDA (Bangarapet).—

Will the Government be pleased to state.—

(*a*) the mileage of the roads taken up to be formed under rural communication fund in each taluk of the P. W. D. Divisions of Kolar and Chikkaballapur;

(Sri F. Narayana Gowda)

(*b*) the mileage of the roads completed in each taluk up to the end of March 1961;

(*c*) whether it is a fact that a directive has been issued by Government that the work in respect of the incomplete roads may be stopped and no payment should be made ?

A.—Sri M. N. Naghnoor (Deputy Minister for Public Works).—

(*a*) I. *Kolar Division*

	Name of Taluk		*Mileage of roads taken up under the Rural Communication Programmes*
			M.—F.
1	Malur ...	...	82—0
2	Kolar ...	...	50—0
3	Bangarpet	...	80—0
4	Mulbagal	...	72—0
5	Srinivaspur	...	10—0
	Total	...	390—0

II. Chickballapur Division

1	Chickballapur	...	183—6
2	Gudibanda	...	80—3
3	Siddlaghatta	...	151—5
4	Bagepalli	...	211—1
5	Gowribidnur	...	259—1
6	Chintamani	...	267—6
	Total	...	1,153—6

(*b*) No roads have yet been completed in all respects. They are in different stages of construction.

(*c*) No.

ಶ್ರೀ ಇ. ನಾರಾಯಣಗೌಡ.—ತಮ್ಮ ಒಂದು ಜಿಲ್ಲೆಗೇ ಸೇರಿದ ಚಿಕ್ಕಬಳ್ಳಾಪುರ ಡಿವಿಜನ್‌ನಲ್ಲಿ 1,153 ಮೈಲಿ ರಸ್ತೆ, ಕೋಲಾರ ಡಿವಿಜನ್‌ನಲ್ಲಿ 390 ಮೈಲಿ ರಸ್ತೆ ಕೆಲಸವನ್ನು ತೆಗೆದುಕೊಂಡಿದೆ. ಈ ರೀತಿ ಎರಡು ಡಿವಿಜನ್‌ಗೂ ವ್ಯತ್ಯಾಸವಾಗಿರುವುದಕ್ಕೆ ಕಾರಣವೇನು ? ಕೋಲಾರ ಕ್ಷಾಮ ಪ್ರದೇಶವೆಂದು ತೀರ್ಮಾನವಾಗಿದ್ದಾಗ್ಯೂ ಕೇವಲ 50,72,80 ಮೈಲಿಗಳನ್ನು ತೆಗೆದುಕೊಳ್ಳುವುದಕ್ಕೆ ಕಾರಣವೇನು ?

†ಶ್ರೀ ಎಂ. ಎನ್. ನಾಗನೂರ್.—ರಸ್ತೆ ನಿರ್ಮಾಣ ಕಾರ್ಯ ಅನೇಕ ವಿಷಯಗಳನ್ನು ಅವಲಂಬಿಸಿರುತ್ತದೆ. ಜನರ ಸಹಕಾರ, ರೋಡ್ ಕಮ್ಯೂನಿಕೇಷನ್ಸ್ ಪ್ರೋಗ್ರಾಂ, ಜಮೀನುಗಳು ಕೂಡಲೇ ಸಿಗುವುದು ಇವೇ ಕೆಲವಂಶಗಳು.

ಶ್ರೀ ಜಿ. ಎಸ್. ನಾರಾಯಣಸ್ವಾಮಿ.—ಚಿಕ್ಕಬಳ್ಳಾಪುರದಲ್ಲಿ 183 ಮೈಲಿ ಶಿಡ್ಲಘಟ್ಟದಲ್ಲಿ 151 ಮೈಲಿ, ಬಾಗೇಪಲ್ಲಿಯಲ್ಲಿ 211 ಮೈ ಲಿ, ಹೀಗೆ ಚಿಕ್ಕಬಳ್ಳಾಪುರ ಡಿವಿಜನ್ನಿನಲ್ಲಿ ಕಚ್ಚಿಗೆ ತೆಗೆದ ಕೊಂಡು, ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಕೇವಲ 106 ಮೈಲಿ ತೆಗೆದುಕೊಂಡು ಪಕ್ಷಪಾತ ತೊರಿಸಲು ಕಾರಣವೇನು ?

Sri M. N. NAGHNOOR.– Sir, the Hon'ble Member should feel more than satisfied because it is Kolar District which has transgressed all limits and done too much mileage as for as rural communications are concerned as compared to other districts, because the programme permits only 50 miles per taluk. But in view of the scarcity conditions prevailing there, Government have been considerate and they allowed a larger mileage in that place and the Hon'ble Member should be more than satisfied.

ಶ್ರೀ ಡಿ. ಅಬ್ದುಲ್ ರಶೀದ್.—ಎಲ್ಲೆಲ್ಲಿ ಕಡಿಮೆ ಮಾಡಿದ್ದೀರೋ, ಅಲ್ಲಿ ಈ ವರ್ಷ ಹೆಚ್ಚಿಗೆ ಮಾಡಲು ಮುಂಜೂರ ತಿ ಕೊಡುತ್ತೀರ ?

ಶ್ರೀ ಎಂ. ಎನ್. ನಾಗನೂರ್.—ಹೆಚ್ಚು ಕಡಿಮೆ ಪ್ರಶ್ನೆ ಇಲ್ಲಿ ಬರುವುದಿಲ್ಲ. ತೆಗೆದುಕೊಳ್ಳ ಬೇಕಾದ್ದು ಐವತ್ತೇ ಮೈಲಿ. ಈ ದೃಷ್ಟಿಯಿಂದ ನೋಡಿದರೆ ಒಂದಕ್ಕೆರಡರಷ್ಟು ತೆಗೆದುಕೊಂಡಿದ್ದೇವೆ. ಅರ್ಧ ಬರ್ನ ಆಗಿರುವುದನ್ನು ಮುಗಿಸುವುದು, ಹಳ್ಳಿಗೋ, ಒಂದು ದೊಡ್ಡ ರಸ್ತೆಗೋ, ಊರಿಗೋ, ರೈಲ್ವೆ ಸ್ಟೇಶನ್ನಿಗೋ, ರಕ್ತ ತೆಗೆದುಕೊಂಡುಹೋಗಿ ಬಿಡುವುದು ಅಷ್ಟೇ ಮಾಡುವುದು. ಕಡಿಮೆ ಇರುವುದನ್ನು ಹೆಚ್ಚಿಗೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

Sri J. B. MALLARADHYA.—What is the policy of the Government ? The Hon'ble Deputy Minister began by saying that as a measure of famine relief, he had taken up a larger mileage for the district. When discrimination was sought to be imputed to Government, he comes out with the answer thatthe Hon'ble Member should be more than satisfied. Which is the taluk in the Kolar District which has suffered most and which has suffered worst ? and with reference to the total mileage, is it justified, that is the question, which I wish to ask.

†Sri H. K. VEERANNA GOWDH.–Once again my friend Sri Mallaradhya is trying to twist the question.

Sri J. B. MALLARADHYA.—It is a very straight question Sir.

Sri H. K. VEERANNA GOWDH.—It is a very plain question and the answer is also plan. Some taluks where people came forward with donation of land required for the roads, they might taken a few miles more. Ordinarily the limit is 50 miles. But in Kolar district because certain conditions prevailing, a little more mileage has been covered. It is no discrimination at all. As the Hon'ble Deputy Minister was answering the question Sir, people do not allow roads to be taken on their lands. There are any number of disputes. One condition was that wherever there was free gift of land required for the roads, works were taken up.

Sri J. B. MALLARADHYA.—That is not my question. My question is this. If the criterian for sanctioning more milage of roads is that the taluk is comparatively more affected, I can understand that there is some justification for increasing the road milage. I want to know

(Sri J. B. MALLARADHYA)

whether with reference to facts Srinivaspur was affected in a greater measure than the other taluks.

Sri H. K. VEERANNA GOWDH.—My Hon'ble friend is confusing the issue. Road making is not the only relief work. In Srinivaspur taluk other relief works might have been taken up. In certain taluks where there was no other work possible, road work was taken. Probably in certain other taluks works like minor irrigation or other small works might have been taken up. Just to give employment to the people various works are taken up and one such work is road making. Where restoration of tanks was not possible and where there was land available road work was taken In Srinivaspur taluk perhaps there were other works taken up. If a definite question about the scarcity condition is put, Government will answer.

ಶ್ರೀ ಸಿ. ಜೆ. ಮುನಿಕೃಷ್ಣಪ್ಪ.—ಚಿಕ್ಕಬಳ್ಳಾಪುರ ಡಿವಿಜನ್ನಲ್ಲಿ ಇಷ್ಟು ಮೈಲೇಜು ತೆಗೆದು ಕೊಂಡು ಕೋಲಾರ ಡಿವಿಜನ್ನಿನಲ್ಲಿಯೇ ಹೆಚ್ಚಾಗಿ ಮಾಡಿದ್ದೀರೆಂದು ಶ್ರೀಮಾನ್ ಮಲ್ಲಾರಾಧ್ಯರು ಕೇಳಿದುದಕ್ಕೆ ನಮಗೆ ಕನ್‌ಫ್ಯೂಸ್ ಮಾಡುತ್ತಿದ್ದಾರೆಂದರು. ಆದರೆ ಚಿಕ್ಕಬಳ್ಳಾಪುರ ಡಿವಿಜನ್ನಿನಲ್ಲಿ ರೋಡು ಮೈಲೇಜು ತೆಗೆದುಕೊಳ್ಳುವಾಗ ಅಧಿಕಾರಿಗಳಿಗೆ ಸರಕಾರದಿಂದ ನಿರ್ದೇಶನೇನಾದರೂ ಹೋಗಿತ್ತೇ ? Was discretion vested in the officer who executed this work ?

Sri H. K. VEERANNA GOWDH.—Wherever there was scarcity condition prevailing the local officers were asked not to restrict themselves to fifty miles but to take up some more milage of roads. That was the general instruction given.

ಶ್ರೀ ಇ. ನಾರಾಯಣಗೌಡ.—ತಮ್ಮ ಪ್ರೊಪೋಗ್ರಾಂ ಪ್ರಕಾರ 50 ಮೈಲಿಗಳಷ್ಟು ರೋಡುಗಳನ್ನು ತೆಗೆದುಕೊಳ್ಳಬೇಕೆಂದಿದ್ದರೂ ಇನ್ನೂ ಹೆಚ್ಚಿಗೆ ತೆಗೆದುಕೊಂಡಿದ್ದೀರಿ ಎಂದು ಹೇಳಿದಿರಿ. ಆದರೆ ಈ ರಸ್ತೆ ಕೆಲಸಗಳು ಇನ್ನೂ ಪೂರ್ತಿಯಾಗಿ ಆಗದೆ ಇರುವುದಕ್ಕೆ ಕಾರಣಗಳೇನು?

ಶ್ರೀ ಹೆಚ್. ಕೆ. ವೀರಣ್ಣಗೌಡ.—ಇದಕ್ಕೆ ಕಾರಣ ಮುಖ್ಯವಾಗಿ ಹಣ ಬೇಕು ಮತ್ತು ಕೆಲಸವಾಗಿರುವ ಕಡೆಗಳಲ್ಲಿ ಅಲ್ಲಿನ ಕೆಲಸಕ್ಕೆ ಆಗಿರುವ ಬಿಲ್ಲುಗಳನ್ನು ಪಾಸು ಮಾಡಿಸಿ ಪೇಮೆಂಟು ಮಾಡಬೇಕು ಮತ್ತು ಇನ್ನೂ ಎಷ್ಟೆಷ್ಟು ಕೆಲಸವಾಗಿದೆ ಎನ್ನುವುದನ್ನು ನೋಡಬೇಕು. 50 ಮೈಲಿಗಳಷ್ಟು ರಸ್ತೆ ಕೆಲಸ ಮಾಡಲು ಇರುವ ತಿಂಗಳು ಬೇಕು. 150 ಮೈಲಿಗಳಷ್ಟು ರಸ್ತೆ ಕೆಲಸ ಮಾಡಬೇಕಾದರೆ ಇನ್ನೂ ಹೆಚ್ಚಿನ ಕಾಲಾವಕಾಶಬೇಕು.

ಶ್ರೀ ಇ. ನಾರಾಯಣಗೌಡ.—ಈಗಲೂ ಕೂಡ ಅಲ್ಲಿ ಕೆಲಸವನ್ನು ಪ್ರಾರಂಭಿಸಿಲ್ಲ.

ಶ್ರೀ ಹೆಚ್. ಕೆ. ವೀರಣ್ಣಗೌಡ.—50 ಮೈಲಿಗಳಿಗಿಂತ ಮೇಲ್ಪಟ್ಟು ತೆಗೆದುಕೊಂಡಿರುವ ಕಡೆಗಳಲ್ಲಿ ಅದಕ್ಕೆ ಸಾಕಾಗುವಷ್ಟು ಹಣವನ್ನು ಒದಗಿಸಿಕೊಡಬೇಕು. ಅದಕ್ಕೆ ಮುಂಚೆ ಅಲ್ಲಿ ಆಗಿರುವ ಕೆಲಸಗಳ ಬಾಕಿ ಬಿಲ್ಲುಗಳನ್ನು ಪೂರ್ತಿ ಪಾವತಿ ಮಾಡಬೇಕಾಗುತ್ತದೆ. ಕೆಲಸವಾಗದೆ ಉಳಿದಿರುವ ಕೆಲಸಗಳನ್ನೆಲ್ಲಾ ಈಗ ಪೂರ್ತಿಗೊಳಿಸೆಂದು ಸರಕಾರದವರು ಈಚೆಗೆ ಆರ್ಡರು ಮಾಡಿದ್ದಾರೆ. ಇವನ್ನೆಲ್ಲಾ ನೋಡಿಕೊಂಡು ರೀ ಅಡ್ಜಸ್ಟು ಮಾಡಿಕೊಂಡು ಮಾಡಬೇಕಾಗಿದೆ.

Sri J. VENKATAPPA.—Has Government taken any action to pay off the arrears and also to see that the roads that are formed are developed and made useful for traffic ?

Sri H. K. VEERANNA GOWDH.—We are taking measures to see that incomplete roads are completed. Money will be provided for that immediately.

Sri J. VENKATAPPA.—Is it not a fact that Government has not so far paid anything towards arrears ?

Sri H. K. VEERANNA GOWDH.—I cannot exactly say yes or not because for payment of the claims money is sanctioned. It may be in the course of payment. For further completion of the works grants will be made available.

Sri D. ABDUL RASHID.—Is it the opinion of Government that scarcity conditions prevail in Chickballapur Division alone ?

Sri H. K. VEERANNA GOWDH.—I answered indirectly that road making does not depend upon scarcity condition. Other works might have been taken up.

Sri G. N. PUTTANNA.—Is there any record to show whether the Assistant Engineer or Executive Engineer made a report to Government of the Chief Engineer that people through whose lands road was passing in Kolar Division were not giving the lands free of cost or were obstructing ?

Sri H. K. VEERANNA GOWDH.—I want notice.

ಶ್ರೀ ಜಿ. ವೆಂಕಟೇಗೌಡ.—ಈ ರಸ್ತೆಗಳನ್ನು ರಿಪೇರಿ ಮಾಡುವುದಕ್ಕೆ ಯಾವ ಏಜೆನ್ಸಿಗೆ ಕೊಟ್ಟಿದೆಯೆಂದು ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ಹೆಚ್. ಕೆ. ವೀರಣ್ಣಗೌಡ.—ತಾಲ್ಲೂಕು ಬೋರ್ಡುಗಳಿಗೆ ಪಟಿಸಬೇಕು ಎಂದು ತೀರ್ಮಾನವಾಗಿದೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಚಿಕ್ಕಬಳ್ಳಾಪುರ ಡಿವಿಜನ್ನಿನಲ್ಲಿ ಅನಧಿಕೃತವಾಗಿ ಅನೇಕ ಕಾಂಗ್ರೆಸ್ಸಿನ ನಾಯಕರುಗಳು ಕೆಲವು ಕಡೆಗಳಲ್ಲಿ ರಸ್ತೆ ಮಾಡಿಸಿ ಆ ನಂತರ ಆ ಕೆಲಸಗಳಿಗೆ ಸರಕಾರದಿಂದ ಹಣ ಪಾವತಿ ಮಾಡಿಸಿಕೊಂಡಿರುವುದರಿಂದ ಇಲ್ಲಿ ಹಣ ದುರ್ಬಳಕೆಯಾಗಿ ಖರ್ಚಾಗಿದೆ ಎಂದು ಹೇಳುವುದು ಸರಿಯೇ ?

Sri H. K. VEERANNA GOWDH.—I refute the allegation.

Sri B. L. NARAYANASWAMY.—I have got records before me.

Mr. SPEAKER.—He may please pass on the record; I will look into it, but he cannot refute Government's reply.

ಶ್ರೀ ಕೆ. ಎಲ್. ನರಸಿಂಹಯ್ಯ.—50 ಮೈಲಿ ರಸ್ತೆಯಾಗಬೇಕು ಎಂದು ಹೇಳಿ ಆ ರೀತಿ ಹೆಚ್ಚಿಗೆ ರಸ್ತೆ ಮಾಡಿರುವ ಅಧಿಕಾರಿಗಳಿಗೆ ಏನಾದರೂ ಪ್ರೋತ್ಸಾಹನ್ನು ಕೊಡುತ್ತೀರಾ ?

Sri H. K. VEERANNA GOWDH.—This does not arise out of this question.

Sri A. R. KARISIDDAPPA.—Supplementary to (c) : May I know what other directive has been given by the Government to these officers ?

Sri H. K. VEERANNA GOWDH.—I have already answered this question. The instructions are that incomplete works should be completed and money will be made available and the claims are to be settled immediately and money is made available for that.

Sri A. R. KARISIDDAPPA.—Is it not a fact that a circular was issued to Assistant Engineers and Executive Engineers to stop all the incomplete works regarding rural communications ?

Sri H. K. VEERANNA GOWDH.—It is not correct. The works might have been stopped temporarily, but we shall take up those works and complete them.

1-30 P. M.

VEHICLES LYING IDLE IN GOVERNMENT ROAD TRANSPORT DEPARTMENT.

*Q.—724. Sri E. NARAYANA GOWDA (Bangarapet).—

Will the Government be pleased to state:—

(*a*) the number of new and old buses in the Government Road Transport Department that are lying idle for the last three years together with the reasons therefor ;

(*b*) whether it is a fact that six chassis are missing out of the new ones bought since the last two years and whether an enquiry has been held in the matter ?

A.— Sri K. F. PATIL (Minister for State Transport, Mining and Food).—

(*a*) No new vehicles are laying idle for the last three years. 10 old vehicles are not in use since 1st January 1957. These 10 vehicles are obsolete models. They are being converted in our workshop by selecting the best ones out of them and changing certain essentail assemblies.

(*b*) No.

ಶ್ರೀ ಇ. ನಾರಾಯಣ ಗೌಡ.—ಸರ್ಕಾರದ ಸಾರಿಗೆ ಇಲಾಖೆಯಲ್ಲಿ ಸುಮಾರು 150-200 ಬಸ್ಸುಗಳು ಸುಮಾರು 6 ತಿಂಗಳುಗಳಿಂದ ಉಪಯೋಗಕ್ಕೆ ಬಾರದೆ ವ್ಯರ್ಥವಾಗಿ ನಿಂತಿವೆ ಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

†ಶ್ರೀ ಕೆ. ಎಫ್. ಪಾಟೀಲ್.—ನೀವು ಕೇಳಿರುವ ಪ್ರಶ್ನೆ 6 ತಿಂಗಳುಗಳಿಂದೆಷ್ಟು ಎಂಬುದಲ್ಲ. ಕಳೆದ ಮೂರುವರ್ಷಗಳಿಂದ ಎಂಬುದಾಗಿ ಕೇಳಿದ್ದಾರೆ. ಅದಕ್ಕಾಗಿ ಉತ್ತರವಲ್ಲಿ 10 ಹಳೇ ವಾಹನಗಳು ಉಪಯೋಗದಲ್ಲಿರಲ್ಲವೆಂದು ಹೇಳಿದೆ.

ಶ್ರೀ ಇ. ನಾರಾಯಣ ಗೌಡ.—ಹಾಗಾದರೆ 6 ತಿಂಗಳುಗಳಿಂದೀಚೆಗೆ ಎಷ್ಟು ಬಸ್ಸುಗಳು ನಿಂತಿವೆ ?

ಶ್ರೀ ಕೆ. ಎಫ್. ಪಾಟೀಲ್.—ಮೂರುವರ್ಷಗಳಿಂದೀಚೆಗೆ ಒಟ್ಟು 185 ಬಸ್ಸುಗಳು.